‘ಗುರು’ ಗ್ರಂಥಮಾಲಿಕೆ : ಖಂಡ ೪

# ಗುರುಗಳು ಶಿಷ್ಯರಿಗೆ ಕಲಿಸುವುದು ಮತ್ತು ಗುರು-ಶಿಷ್ಯರ ಸಂಬಂಧ

(The Guru’s teachings and His relationship with the disciples)

ಕನ್ನಡ (Kannada)

**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೮’ ರಲ್ಲಿ ಓದಿ.)

**ಪೂ. ಸಂದೀಪ ಗಜಾನನ ಆಳಶಿ**

**ಸನಾತನ ಸಂಸ್ಥೆ**

ನವೆಂಬರ್ ೨೦೨೨ ರವರೆಗೆ ಸನಾತನದ ೩೫೫ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೧,೭೮,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ-29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ-ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು ಸೌ. ಯೋಗೆಶ್ರೀ ಘೋಳೆ

ಫೆಬ್ರವರಿ 2022 ರಲ್ಲಿ 'ಗುರುಗಳು ಶಿಷ್ಯರಿಗೆ ಕಲಿಸುವುದು ಮತ್ತು ವರ್ತಿಸುವುದು' ಈ ಮೂಲ ಖಂಡವನ್ನು (ಪ್ರಥಮ ಆವೃತ್ತಿ : 11.8.2013) 'ಗುರುಗಳ ವರ್ತನೆ, ಕಾರ್ಯ ಮತ್ತು ಗುರುಪರಂಪರೆ' ಮತ್ತು 'ಗುರುಗಳು ಶಿಷ್ಯರಿಗೆ ಕಲಿಸುವುದು ಮತ್ತು ಗುರು-ಶಿಷ್ಯರ ಸಂಬಂಧ' ಈ ಎರಡು ಖಂಡಗಳಲ್ಲಿ ವಿಭಜಿಸಲಾಗಿದೆ.

**First Edition** : Rathasaptami, Kaliyug Varsh 5123
(7th February 2022)

**First Reprint** : Datta Jayanti, Kaliyug Varsh 5124
(7th December 2022)

Translated from the original Marathi text 'Gurunche shishyanna shikavane ani Guru-shishya sambandha'
ಪ್ರಸ್ತುತ ಗ್ರಂಥವು ಹಿಂದಿ ಭಾಷೆಯಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ನಾಯಕ್, ಡಾ. ಪ್ರಕಾಶ ಘಾಳಿ,
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು - 560 010.

**ದೇಣಿಗೆ ಮೌಲ್ಯ** : ₹ 65/-

**ISBN** : 978-93-92952-30-2

ॐ ಗ್ರಂಥ ಕ್ರ. : 263

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ವಿಷಯಸೂಚಿ


೧. ಗ್ರಂಥದ ಸಂಕಲನಕಾರರ ಪರಿಚಯ ೫

೨. ಮನೋಗತ ೭


---

## ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಶಿಷ್ಯನಿಗೆ ಜ್ಞಾನ ನೀಡುವ ದೃಷ್ಟಿಯಿಂದ ಗುರುಗಳ ಮಹತ್ವ** ೧೦

**೨. ಗುರುಗಳು ಶಿಷ್ಯರಿಗೆ ಕಲಿಸುವುದು** ೧೦

* ಕವಿತೆ, ಭಜನೆ ಮತ್ತು ಸುವಚನಗಳಿಂದ ಕಲಿಸುವುದು ೧೧
* ಪ್ರತ್ಯಕ್ಷ ಕಲಿಸುವುದು ೧೩
* ವಿನೋದದಿಂದ ಕಲಿಸುವುದು ೨೩
* ವರ್ತನೆಯಿಂದ (ಪರೋಕ್ಷವಾಗಿ) ಕಲಿಸುವುದು ೨೪
* ಸ್ವಪ್ನಗಳಿಂದ ಕಲಿಸುವುದು ೨೬
* ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಒಯ್ಯುವುದು ೨೯
* ಪಂಚತತ್ತ್ವಾತ್ಮಕ ಸ್ವರೂಪದಲ್ಲಿ ಕಲಿಸುವುದು ೩೦

**೩. ಗುರು–ಶಿಷ್ಯ ಸಂಬಂಧ** ೩೬

* ಶಿಷ್ಯನ ಹಿಂದಿನ ಜನ್ಮದಲ್ಲಿನ ಪುಣ್ಯದಿಂದ ಗುರುಗಳು ಸಾಧಕನ ಜೀವನದಲ್ಲಿ ಬರುತ್ತಾರೆ ೩೬
* ಶಿಷ್ಯನ ಆರ್ಥಿಕ ಸ್ಥಿತಿಯನ್ನು ಗಮನಿಸುವುದು ೩೮
* ನಿಷ್ಕಾಮ ಶಿಷ್ಯನ ಸಕಾಮ ಇಚ್ಛೆಗಳನ್ನು ಪೂರ್ಣಗೊಳಿಸುವುದು ೪೨
* ಶಿಷ್ಯನ ಕಡೆಗೆ ನೋಡುವ ಗುರುಗಳ ದೃಷ್ಟಿಕೋನ ೪೨
* ಶಿಷ್ಯನಿಗಾಗಿ ದ್ವೈತದಲ್ಲಿ ಬರುವುದು ೪೫
* ಶಿಷ್ಯನ ಸೂಕ್ಷ್ಮ 'ಅಹಂ' ಅನ್ನು ಹೋಗಲಾಡಿಸುವುದು ೪೮
* ಶಿಷ್ಯನ ರೋಗ ಮತ್ತು ಮೃತ್ಯು ೫೪
* ಇತರ ಗುರುಗಳ ಶಿಷ್ಯರೊಂದಿಗೆ ವರ್ತಿಸುವುದು ೫೭
* ಶಿಷ್ಯರಿಂದ ಗುರುಗಳಿಗಾಗುವ ಹಾನಿ ಮತ್ತು ಲಾಭಗಳು ೫೯

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೬೩

## ವಿಷಯಸೂಚಿಯಲ್ಲಿನ ಕ್ರಮಾಂಕ ೨

## ಮನೋಗತ

ಗುರುಗಳು ಜ್ಞಾನಿಗಳ ರಾಜರಾಗಿದ್ದಾರೆ ಎಂದು ಸಂತ ಜ್ಞಾನದೇವರು ಹೇಳಿದ್ದಾರೆ. ಯಾರು ಜ್ಞಾನವನ್ನು ಕೊಡುತ್ತಾರೆಯೋ, ಅವರೇ ಗುರುಗಳು ! ಶಿಲೆಯಿಂದ ಶಿಲ್ಪವು ತಯಾರಾಗಬಹುದು; ಆದರೆ ಅದಕ್ಕೆ ಶಿಲ್ಪಿ ಬೇಕಾಗುತ್ತಾನೆ. ಅದೇರೀತಿ ಸಾಧಕರು ಮತ್ತು ಶಿಷ್ಯರು ಈಶ್ವರನನ್ನು ಪ್ರಾಪ್ತಗೊಳಿಸಿಕೊಳ್ಳಬಲ್ಲರು; ಆದರೆ ಅದಕ್ಕೆ ಗುರುಗಳ ಆವಶ್ಯಕತೆಯಿರುತ್ತದೆ. ಗುರುಗಳು ತಮ್ಮ ಬೋಧಾಮೃತದಿಂದ ಸಾಧಕರ ಮತ್ತು ಶಿಷ್ಯರ ಅಜ್ಞಾನವನ್ನು ದೂರಗೊಳಿಸಿದ ನಂತರವೇ ಅವರಿಗೆ ಈಶ್ವರಪ್ರಾಪ್ತಿಯಾಗುತ್ತದೆ.

ಸಾಧಕರು ಮತ್ತು ಶಿಷ್ಯರು ಸಾಧನೆಯನ್ನು ಮಾಡುವಾಗ ಅವರು ಏನು ಮಾಡಬೇಕು, ಏನು ತ್ಯಜಿಸಬೇಕು ಮುಂತಾದವುಗಳ ಅರಿವನ್ನು ಗುರುಗಳು ಮಾಡಿಕೊಡುತ್ತಾರೆ. ಗುರುಗಳು ಕೇವಲ ಉಪದೇಶದಿಂದ ಮಾತ್ರವಲ್ಲದೇ ಸಾಮಾನ್ಯವೆನಿಸುವ ನಡೆ-ನುಡಿಗಳಿಂದಲೂ ತುಂಬಾ ವಿಷಯಗಳನ್ನು ಕಲಿಸುತ್ತಾರೆ. ಸಾಧಕರಿಗೆ ಮತ್ತು ಶಿಷ್ಯರಿಗೆ ಗುರುಗಳ ನಡೆ-ನುಡಿಗಳ ಭಾವಾರ್ಥ ತಿಳಿಯದಿದ್ದರೆ ಅವರು ಗುರುಗಳ ಅಮೂಲ್ಯ ವಿಚಾರಗಳಿಂದ ವಂಚಿತರಾಗುತ್ತಾರೆ. ಗುರುಗಳು ವಿವಿಧ ಪದ್ಧತಿಗಳಿಂದ ಕಲಿಸುತ್ತಾರೆ, ಉದಾ. ವಿನೋದದಿಂದ ಕಲಿಸುವುದು, ಕನಸಿನಲ್ಲಿ ಕಲಿಸುವುದು, ಅನುಭೂತಿಗಳಿಂದ ಕಲಿಸುವುದು, ಪರೀಕ್ಷೆಗಳಿಂದ ಕಲಿಸುವುದು, ಸೂಕ್ಷ್ಮದಿಂದ ಕಲಿಸುವುದು. ಪ್ರಸ್ತುತ ಗ್ರಂಥದಲ್ಲಿ ಇವೆಲ್ಲ ಪದ್ಧತಿಗಳನ್ನು ಉದಾಹರಣೆಗಳೊಂದಿಗೆ ಕೊಡಲಾಗಿದೆ. ಇದರಿಂದ ವಿವಿಧ ಅಂಗಗಳಿಂದ ಗುರುಗಳಿಂದ ಹೇಗೆ ಕಲಿಯಬೇಕು ಮತ್ತು ನಿಜವಾದ ಅರ್ಥದಲ್ಲಿ ಅವರಿಂದ ಹೇಗೆ ಲಾಭವನ್ನು ಪಡೆದುಕೊಳ್ಳಬೇಕು ಎಂಬುದರ ಒಂದು ಹೊಸ ದೃಷ್ಟಿ ವಿಕಾಸಗೊಳ್ಳಲು ಸಹಾಯವಾಗುವುದು.

ನಮ್ಮ ಗುರುಗಳಾದ ಪ.ಪೂ. ಭಕ್ತರಾಜ ಮಹಾರಾಜರು (ಬಾಬಾರವರು) ಯಾವಾಗಲೂ, 'ನಾನು ಯಾರ ಗುರುವೂ ಅಲ್ಲ; ಆದರೆ ಶಿಷ್ಯರನ್ನಾಗಿಸದೇ ಬಿಡುವುದಿಲ್ಲ !' ಎಂದು ಹೇಳುತ್ತಿದ್ದರು. ಶಿಷ್ಯರೆಂದರೆ 'ತತ್ತ್ವಮಸಿ'ಯ ಶಿಷ್ಯ, ಅಂದರೆ ಗುರುತತ್ತ್ವದ ಶಿಷ್ಯರು ! ಸಂಕಲನಕಾರರ ಪೈಕಿ ಡಾ. ಜಯಂತ ಆಠವಲೆಯವರೂ ಸ್ವತಃ ತಮ್ಮನ್ನು 'ಗುರು' ಎಂದು ತಿಳಿದುಕೊಳ್ಳದೇ 'ಬಾಬಾರವರ ಶಿಷ್ಯ'ರೆಂಬ ಭಾವದಲ್ಲಿಯೇ ಇರುತ್ತಾರೆ. ಹೀಗಿದ್ದರೂ ಬಾಬಾರವರ ಬೋಧನೆಗನುಸಾರ ಸಾಧಕರನ್ನು ಗುರುತತ್ತ್ವದ ಶಿಷ್ಯರನ್ನಾಗಿಸಲು ಮಾತ್ರ ಹಗಲುರಾತ್ರಿ ಪ್ರಯತ್ನಿಸುತ್ತಿರುತ್ತಾರೆ. 'ಸನಾತನ ಸಂಸ್ಥೆ'ಯ ಸಾಧಕರು ಅವರನ್ನು 'ಪರಾತ್ಪರ ಗುರು'ಗಳ

ರೂಪದಲ್ಲಿ ನೋಡುತ್ತಾರೆ. ಆದುದರಿಂದಲೇ ಪ.ಪೂ. ಡಾಕ್ಟರರು ಸಾಧಕರಿಗೆ ಕಲಿಸುವುದರ ವಿಷಯಗಳ ಬಗೆಗಿನ ಅನೇಕ ಉದಾಹರಣೆಗಳನ್ನು ಗ್ರಂಥದಲ್ಲಿ ಕೊಡಲಾಗಿದೆ. ಸಾಧಕರು ಬರೆದಿರುವ ಲೇಖನ ಅಥವಾ ಅನುಭೂತಿಗಳಲ್ಲಿ 'ಪ.ಪೂ. ಡಾಕ್ಟರ್' ಎಂಬ ಉಲ್ಲೇಖವಿದೆ, ಅದು ಅವರ ಸಂದರ್ಭದಲ್ಲಿನದಾಗಿದೆ.

'ಈ ಗ್ರಂಥದ ಮೂಲಕ ಜಿಜ್ಞಾಸುಗಳು, ಸಾಧಕರು ಮತ್ತು ಶಿಷ್ಯರು ಸಾಧನೆಗೆ ಆವಶ್ಯಕವಿರುವ ಜ್ಞಾನವನ್ನು ಉತ್ತಮ ರೀತಿಯಲ್ಲಿ ಅಳವಡಿಸಿಕೊಳ್ಳಲಿ ಮತ್ತು ಅವರ ಪ್ರಯಾಣವು ಈಶ್ವರಪ್ರಾಪ್ತಿಯ ಕಡೆಗೆ ಶೀಘ್ರವಾಗಿ ಆಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

## ಡಾ. ಜಯಂತ ಆಠವಲೆಯವರ ಹೆಸರಿಗೆ ಸೇರಿಸುವ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

'೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ' ಎಂದು ಸಂಬೋಧಿಸಲಾಗುತ್ತಿದೆ. 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನಿಂದ ಸಂಬೋಧಿಸುವುದರಿಂದ 'ಪರಾತ್ಪರ ಗುರು ಡಾ. ಆಠವಲೆಯವರಲ್ಲಿರುವ ಈಶ್ವರೀ ತತ್ತ್ವದಿಂದ ಎಲ್ಲರಿಗೂ ಲಾಭವಾಗಬೇಕು' ಎಂಬುದು ಸಪ್ತರ್ಷಿಗಳ ಆಜ್ಞೆಯ ಉದ್ದೇಶವಾಗಿದೆ. (೧೩.೭.೨೦೨೨ ಕ್ಕೂ ಮೊದಲು ಸನಾತನದ ಗ್ರಂಥಗಳಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರನ್ನು 'ಪ.ಪೂ. [ಪರಮ ಪೂಜ್ಯ]' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ.)

**– (ಪೂ.) ಶ್ರೀ. ಸಂದೀಪ ಆಳಶಿ, ಸನಾತನ ಆಶ್ರಮ, ಗೋವಾ (೨೪.೭.೨೦೨೨)**


## ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !

- ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು
- ಗ್ರಂಥದ ರಚನೆಯನ್ನು 'ಇನ್‌ಡಿಸೈನ್' ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

**ಸಂಪರ್ಕಿಸಿ :** ೯೩೪೨೪ ೩೫೬೧೭ ✉ kannada.granth@gmail.com